ಮಾಡಿಸಿದ್ದೇನೆ. ಇವತ್ತು ಅವರು ಹೇಳುವುದೇನು, ಇವರು ಹೇಳುವುದೇನು ಅದು ನನಗೆ ಸಂಬಂಧವಿಲ್ಲದೇ ಇರತಕ್ಕಂಥ ವಿಚಾರ. ದಯವಿಟ್ಟು ಬಿ. ಜೆ. ಪಿ. ಮಿತ್ರರು ಇದನ್ನು ನಿಲ್ಲಿಸಿ ಅವರು ರೈತರ ಬಗ್ಗೆ ಮಾತನಾಡುವುದು ಬೇಡ. ಏನು ಹಳೇ ವಾಗ್ದಾನವನ್ನು ಹಿಡಿದುಕೊಂಡು ಮುಂದಕ್ಕೆ ಹೋಗಲಿ. ನಡೆಯುವುದನ್ನು ಬೇಕಾದರೆ ನೋಡೋಣ. ಇಷ್ಟು ವಿಚಾರ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಪ್ರಸ್ತಾಪಿಸಲಾದ ವಿಷಯಗಳು) (ಮುಂದುವರಿದುದು)

ಬೆಳ್ತಂಗಡಿದ ಉಜಿರೆ ಮತ್ತು ಧರ್ಮಸ್ಥಳಗಳಲ್ಲಿ ಬಸ್ ನಿಲ್ದಾಣವನ್ನು ರಚಿಸುವ ಬಗ್ಗೆ

ಶ್ರೀ ಕೆ. ಗಂಗಾಧರಗೌಡ (ಬೆಳ್ತಂಗಡಿ):- ಮಾನ್ಯ ಉಪಾಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕಿನಲ್ಲಿ ರಾಷ್ಟ್ರೀಕರಣಗೊಂಡ ಬಸ್ಸು ಮಾರ್ಗಗಳಿವೆ. ಅಲ್ಲದೆ ಧರ್ಮಸ್ಥಳದಲ್ಲಿ ಸರ್ಕಾರಿ ಬಸ್ ಡಿಪೋ ಇದೆ. ದಿನ ಒಂದಕ್ಕೆ ೨೦೦ ಕ್ಕೂ ಹೆಚ್ಚು ಬಸ್ಸುಗಳು ಬೆಳ್ತಂಗಡಿ ತಾಲೂಕಿನಲ್ಲಿ ಹಾದುಹೋಗುತ್ತವೆ. ಆದರೆ ಇಷ್ಟರತನಕ ಬೆಳ್ತಂಗಡಿ ತಾಲೂಕು ಕೇಂದ್ರದಲ್ಲಿ ಬಸ್ಸು ನಿಲ್ದಾಣ ನಿರ್ಮಾಣವಾಗಿಲ್ಲ. ಈಗ ಕೆಲವು ದಿನಗಳ ಹಿಂದೆ ಈ ಬಗ್ಗೆ ಪ್ರಶ್ನೆ ಕೇಳಿದಾಗ ಬೆಳ್ತಂಗಡಿ ತಾಲೂಕು ಸರ್ಕಾರಿ ಸ್ವಾಮ್ಯದ ವಲಯದಲ್ಲಿ ಇಲ್ಲ ಎಂದು ಉತ್ತರ ಕೊಟ್ಟಿರುವುದು ಇಲಾಖೆಯ ಅಧಿಕಾರಿಗಳ ಅಜ್ಞಾನವನ್ನು ತೋರಿಸುತ್ತದೆ. ಸಾವಿರಾರು ಜನರು ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಧರ್ಮಸ್ಥಳ ಇತ್ಯಾದಿ ಭಾಗಗಳಿಗೆ ಬರುತ್ತಿದ್ದು ಬಸ್ಸುತಂಗುದಾಣವಿಲ್ಲದೆ ನರಕಯಾತನೆ ಪಡುತ್ತಿರುತ್ತಾರೆ. ಆದ್ದರಿಂದ ಬೆಳ್ತಂಗಡಿ, ಉಜಿರೆ, ಧರ್ಮಸ್ಥಳದಲ್ಲಿ ಸರ್ಕಾರ ಬಸ್ಸು ನಿಲ್ದಾಣ ರಚಿಸಬೇಕಾಗಿ ಮಾನ್ಯ ಸಾರಿಗೆ ಮಂತ್ರಿಗಳ ಮುಖಾಂತರ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಾಂತ್ರಿಕ ಹಾಗೂ ಪರಿಸರ ಇಲಾಖಾ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳು ವಿಧಾನ ಪರಿಷತ್ತಿಗೆ ಹೋಗಿರುವುದರಿಂದ, ಅವರ ಪರವಾಗಿ ಈ ಲಿಖಿತ ಉತ್ತರವನ್ನು ಕೊಡುತ್ತಿದ್ದೇನೆ. ಬೆಳ್ತಂಗಡಿಯು ದಕ್ಷಿಣ ಕನ್ನಡದ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಈ ಪಟ್ಟಣವು ಸಾರಿಗೆ ರಾಷ್ಟ್ರೀಕರಣವಾಗದ ವಲಯದಲ್ಲಿದೆ. ಬರೇ ಕೆಲವು ಮಾರ್ಗಗಳನ್ನು ಮಾತ್ರ ರಾಷ್ಟ್ರೀಕರಣ ಮಾಡಲಾಗಿದೆ. ಸದ್ಯ ೧೪೫ ವಾಹನಗಳು ಈ ಬಸ್ ನಿಲ್ದಾಣಕ್ಕೆ ತಲುಪಿ ಪ್ರಯಾಣಿಕರನ್ನು ಪ್ರತಿನಿತ್ಯ ಮಂಗಳೂರು-ಚಾರ್‌ಮುಡಿ ಮೂಲಕ ಕೊಂಡೊಯ್ಯುತ್ತವೆ. ಹಾಲಿ ಇರುವ ಬಸ್ ನಿಲ್ದಾಣವು ಮಂಡಲ ಪಂಚಾಯಿತಿಯ ಒಡೆತನದಲ್ಲಿರುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಖಾಸಗೀ ಮಾಲೀಕರು ಬಸ್ ಒಡಾಟಕ್ಕೆ ಈ ಬಸ್ ನಿಲ್ದಾಣವನ್ನೇ ಉಪಯೋಗಿಸುತ್ತಿವೆ. ಇಬ್ಬರು ಸಂಚಾರ ನಿಯಂತ್ರಕರು ಈ ಸಂಚಾರ ನಿಯಂತ್ರಣ ಕೇಂದ್ರದ ಕಾರ್ಯವನ್ನು ನೋಡಿಕೊಳ್ಳುತ್ತಿದ್ದಾರೆ. ಆಧುನಿಕ ಸೌಲಭ್ಯ ಉಳ್ಳ ಬಸ್ ನಿಲ್ದಾಣ ನಿರ್ಮಿಸಲು ಮಂಡಲ ಪಂಚಾಯಿತಿಯ ಒಡೆತನದಲ್ಲಿರುವ ೦.೪೭ ಸೆಂಟ್ಸ್ ನಿವೇಶನ ಮತ್ತು ಕಟ್ಟಡಗಳನ್ನು ಖರೀದಿಸಲು ಪ್ರಯತ್ನಿಸಲಾಯಿತು. ಈ ಬಸ್ ನಿಲ್ದಾಣ ಮತ್ತು ಕಟ್ಟಡಕ್ಕೆ ಮಂಡಲ ಪಂಚಾಯ್ತಿಯವರು ೨,೦೧,೪೪೭ ರೂ. ಗಳನ್ನು ಬೇಡುತ್ತಿದ್ದಾರೆ. ಇದು ಅತಿ ದುಬಾರಿ ಎಂದು ಪರಿಗಣಿಸಲಾಗಿದೆ. ಇದೂ ಅಲ್ಲದೆ ೦.೪೭ ಸೆಂಟ್ಸ್ ನಿವೇಶನ ಈ ಸ್ಥಳದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸಾಲುವುದಿಲ್ಲ. ಆದ್ದರಿಂದ ಬಸ್ ನಿಲ್ದಾಣಕ್ಕೆ ಬೇರೊಂದು ಸೂಕ್ತವಾದ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಗಿದೆ. ವಿಧಾನ ಸಭಾ ಪ್ರಶ್ನೆ ಸಂಖ್ಯೆ ೧೩೫೭ಕ್ಕೆ ನೀಡಿದ ಉತ್ತರವು ಸಮರ್ಪಕವಾಗಿರುತ್ತದೆ. ಈ ವಲಯವು

ರಾಷ್ಟ್ರೀಕರಣವಾಗಿಲ್ಲ. ಆದರೆ ಮಂಗಳೂರು-ಚಾರ್‌ಮುಡಿ, ಮಂಗಳೂರು-ಹಾಸನ ವಯಾ ಸಕಲೇಶಪುರ, ಮಂಗಳೂರು-ಮಡಿಕೇರಿ ವಯಾ ಪುತ್ತೂರು ಮತ್ತೆ ಪುತ್ತೂರು-ಸುಬ್ರಮಣ್ಯ ಮಾರ್ಗ ರಾಷ್ಟ್ರೀಕೃತವಾಗಿದೆ. ಸೂಕ್ತ ನಿವೇಶನವನ್ನು ಸ್ವಾಧೀನಕ್ಕೆ ಪಡೆದ ನಂತರ ಬಸ್‌ನಿಲ್ದಾಣ ನಿರ್ಮಿಸಲಾಗುವುದು.

ಉಜಿರೆ:- ಉಜಿರೆ ಕೂಡ ಬೆಳ್ತಂಗಡಿ ತಾಲ್ಲೂಕಿನ ಒಂದು ಗ್ರಾಮ. ಧರ್ಮಸ್ಥಳದ ಕಡೆಗೆ ಸಂಚರಿಸುವ ವಾಹನಗಳು ಈ ಸ್ಥಳದಲ್ಲಿ ನಿಂತು ಪ್ರಯಾಣಿಕರನ್ನು ಕೊಂಡೊಯ್ಯುತ್ತವೆ. ಸದ್ಯ ಇಖಸಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳು ಈ ಗ್ರಾಮವನ್ನು ತಲುಪುತ್ತವೆ. ಈ ಗ್ರಾಮವು ಧರ್ಮಸ್ಥಳದಿಂದ ಬರೇ ೧೦ ಕಿ. ಮೀ. ಗಳ ಅಂತರದಲ್ಲಿರುವುದರಿಂದ ಆಧುನಿಕ ಮಾದರಿಯ ಬಸ್ ನಿಲ್ದಾಣದ ಆವಶ್ಯಕತೆ ಇರುವುದಿಲ್ಲ. ಧರ್ಮಸ್ಥಳದಲ್ಲಿ ಆಧುನಿಕ ಮಾದರಿಯ ಬಸ್ ನಿಲ್ದಾಣದ ಆವಶ್ಯಕತೆ ಇರುತ್ತದೆ. ಒಂದು ದೊಡ್ಡ ಮಾದರಿಯ ತಂಗುದಾಣದ ಸೌಲಭ್ಯ ಒದಗಿಸಿದರೆ ಸಾಕಾಗುತ್ತದೆ. 'ಸಹೃದಯ ವೇದಿಕೆ' ಎಂಬ ಸಂಸ್ಥೆಯು ಉಚಿತವಾಗಿ ಈ ಉದ್ದೇಶಕ್ಕೆ ನಿವೇಶನ ನೀಡಲು ಮುಂದೆ ಬಂದಿದೆ. ಮಂಗಳೂರಿನ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಈ ದಿಸೆಯಲ್ಲಿ ಸೂಕ್ತ ಸಲಹೆ ನೀಡಲಾಗಿದೆ. ನಿವೇಶನದ ಹಸ್ತಾಂತರವಾದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಧರ್ಮಸ್ಥಳ:- ಧರ್ಮಸ್ಥಳ ಕೂಡಾ ಒಂದು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಮುಖ ಯಾತ್ರಾ ಸ್ಥಳ. ಇಲ್ಲಿ ಒಂದು ಬಸ್ ಡಿಪೋ ಇದೆ. ಆದರೆ ಬಸ್ ನಿಲ್ದಾಣ ಇರುವುದಿಲ್ಲ. ಸದ್ಯ ಇಲ್ಲಿ ಕೂಡ ಇಖಸಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಆಗಮನ ನಿರ್ಗಮನಗಳಿವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಧರ್ಮಸ್ಥಳ ದೇವಸ್ಥಾನ ಧರ್ಮಾಧಿಕಾರಿಯನ್ನು ಸಾಕಷ್ಟು ನಿವೇಶನವನ್ನು ಒದಗಿಸುವಂತೆ ಒತ್ತಾಯಿಸುತ್ತಿದೆ. ದೇವಸ್ಥಾನದ ಅಧಿಕಾರಿಗಳು ಸೂಚಿಸಿದ ನಿವೇಶನವು ಸಮಂಜಸವಾಗಿಲ್ಲ ಕಾರಣ ಈ ಸಂಸ್ಥೆಯು ಬೇರೆ ತೆಂಗಿನ ತೋಟದ ಜಮೀನನ್ನು ಆಯ್ಕೆ ಮಾಡಿದೆ. ಈ ವಿಷಯದ ಬಗ್ಗೆ ದೇವಸ್ಥಾನದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರಿನ ಲಕ್ಕಸಂದ್ರದ ಬಂಡೆಯ ಬಳಿ ಕೂಡಲೇ ಕಲ್ಲು ಚಪ್ಪಡಿಗಳನ್ನು ಹಾಕುವ ಬಗ್ಗೆ

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರಿನ ಲಕ್ಕಸಂದ್ರದ ಬಳಿ ಒಂದು ದೊಡ್ಡ ಬಂಡೆ ಕ್ವಾರಿ ಇದ್ದು, ಅದರ ಸುತ್ತಲೂ ಹಾಕಿದ್ದ ಕಲ್ಲು ಚಪ್ಪಡಿಗಳು ಬಿದ್ದುಹೋಗಿದ್ದು, ೮-೯-೨೦೦೨ರಂದು ಇಬ್ಬರು ಮಕ್ಕಳು ಹಳ್ಳಕ್ಕೆ ಬಿದ್ದು ತೊಂದರೆಗೀಡಾಗಿದ್ದಾರೆ. ಇದೇ ರೀತಿ ಹಲವಾರು ಜನ ಅಪಾಯಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಕೂಡಲೇ ಬಿದ್ದು ಹೋಗಿರತಕ್ಕ ಎಲ್ಲಾ ಕಲ್ಲು ಚಪ್ಪಡಿಗಳನ್ನು ಹಾಕಿಸಲು ಬೆಂಗಳೂರು ಮಹಾನಗರ ಪಾಲಿಕೆಯವರು ಕ್ರಮ ಕೈಗೊಳ್ಳ ಬೇಕಾಗಿದೆ. ಆದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ. ಜೆ. ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೇ, ವಿಭಾಗ ೫೫ ಲಕ್ಕಸಂದ್ರದ, ಬನ್ನೇರುಘಟ್ಟ ರಸ್ತೆಗೆ ಹೊಂದಿಕೊಂಡಿರುವ ಹಲವು ಪ್ರದೇಶಗಳ